ಎರಡೇ ಬಾರಿ. ಒಮ್ಮೆ ಅದನ್ನು ಪಡೆಯುವ ಮೊದಲು. ಇನ್ನೊಮ್ಮೆ ಪೂರಾ ಕಳೆದುಕೊಂಡಾಗ!

ಹಲವು ದಿನಗಳಿಂದ ಎದೆಯಾಳದಲ್ಲಿ ಕದಲುತ್ತ ಕಾಡುತ್ತಿದ್ದ ಅದೊಂದು ಸಂದೇಶವನ್ನು ಪರಿಹರಿಸಿಕೊಳ್ಳುವ ತವಕ ಅತಿಯಾಯ್ತು. ಒಂದುದಿನ ಮನೆಯಲ್ಲಿ ಲಲಿತೆಯಿಲ್ಲದ ಸಮಯ ನೋಡಿ ಕ್ಷಮಾಳ ಪೂರ್ವಾಪರ ವಿಚಾರಿಸಿದೆ. ನನ್ನ ಊಹೆ ಸರಿಯಾಗಿತ್ತು. ಈ ಹುಡುಗಿ ನನ್ನ ಪ್ರೇಮಾಳ ವಂಶದ ಕುಡಿ! ಮಗಳಲ್ಲ – ಮೊಮ್ಮಗಳು! ಎಲ್ಲ ವಿವರಗಳೂ ಒಂದೊಂದಾಗಿ ತಿಳಿದುಬಂದವು. ತಂದೆಯ ಪ್ರಭಾವ ಮತ್ತು ಬಲವಂತದಿಂದ ಹದಿನೆಂಟಕ್ಕೇ ಪ್ರೇಮಾಳ ವಿವಾಹ ನಡೆದಿತ್ತು. ಗಂಡ, ಮಕ್ಕಳು, ಕುಟುಂಬ, ಕಡೆಗೆ ಸಮಾಜದ ನೆಲೆಯಲ್ಲು ತನ್ನದಾದ ಕರ್ತವ್ಯ ಬಾಧ್ಯತೆಗಳನ್ನೆಲ್ಲಾ ನಿರ್ವಹಿಸಿ ನಲ್ವತ್ತರೊಳಗೇ ಇಹಲೋಕ ತ್ಯಜಿಸಿದಳು. ಸಾವು ಒಂದು ಆಕಸ್ಮಿಕ. ಆದರೆ, ಬದುಕನ್ನು ತನ್ನೆಲ್ಲ ಸಂಸ್ಕಾರ ಮತ್ತು ಮೌಲ್ಯಗಳಿಂದ ಸಂಪನ್ನಗೊಳಿಸಿದಳು. ಮರಣದಲ್ಲು ಸ್ವಾಧೀನವಾಗಿ ಉಳಿಸಿಕೊಂಡಿದ್ದ ಘನತೆ ಗಮನೀಯವಾಗಿತ್ತು. ಬರಹಗಳಿಂದ ಬೀರಿದ ಪ್ರಭಾವವೂ ಚಿರಂತನವೆನಿಸಿತ್ತು. ಮಗ ಚೆನ್ನಾಗಿ ಓದಿ ಫಾರಿನ್‌ನಲ್ಲೇ ಸೆಟಲ್ಲಾಗಿದ್ದ. ತಾಯಿಯ ಕಡೆಯ ಹಲವು ಆಸ್ತಿ ವ್ಯವಹಾರಗಳ ನಿರ್ವಹಣೆಗೆ ಮಗಳು ಈ ಊರಿಗೆ ಬರಬೇಕಾಯ್ತು. ಹಾಗೇ ಈ ಹುಡುಗಿ ನನ್ನೆದುರು ಬಂದು ಬದುಕಿನ ಪುಸ್ತಕದ ಮೊದಲ ಪುಟಗಳು ಮತ್ತೊಮ್ಮೆ ಪಟಪಟನೆ ಹೊಡೆದುಕೊಳ್ಳುವಂತೆ ಮಾಡಿದ್ದಾಳೆ. ಹೆಸರು ಕ್ಷಮಾ. ಕ್ಷಮೆ ಅನ್ನುವುದು ಪ್ರೀತಿಯ ಇನ್ನೊಂದು ರೂಪ. ಮಧುರವಾದ ಪ್ರತೀಕಾರ. ಸೋತು ಗಳಿಸುವ ಸ್ವಾಧೀನ! ನನ್ನ ಆ ಹಳೆಯ ಡೈರಿ ನೆನಪಾಯ್ತು. ಆ ಪತ್ರ ಇನ್ನೂ ಹಾಗೇ ಇರಬಹುದೇ? ಅದೆಷ್ಟೋ ಕಾಲದಿಂದ ಕೈಗೆತ್ತಿಕೊಂಡಿರಲೇ ಇಲ್ಲ. ಒಂದೇ ಒಂದು ಬಾರಿ ತೆಗೆದು ನೋಡುವ ಬಯಕೆ ತಡೆಯದಂತಾಯ್ತು.

ಬೆಡ್‌ರೂಮಿಗೆ ಹೋಗಿ ಮೇಲಿನ ಕಪಾಟಿನ ಡೋರ್ ತೆಗೆದು ನೋಡಿದೆ. ಪೆಟ್ಟಿಗೆಯೊಳಗೆ ಅರ್ಧಶತಮಾನದ ರಾಶಿ ಡೈರಿಗಳು. ಪ್ರತಿವರ್ಷದ ಆಯವ್ಯಯಗಳ, ಟೂರು, ಹಾಸ್ಪಿಟಲ್ಲು, ದಾನ–ದತ್ತಿಗಳ ವಿವರಗಳನ್ನು ತಮ್ಮೊಳಗೆ ತುಂಬಿಕೊಂಡ ಹೊತ್ತಗೆಗಳು. ಎಲ್ಲಾ ಅಂಕಿಸಂಖ್ಯೆಗಳಲ್ಲೆ ವ್ಯಕ್ತವಾಗುವ ರಾಶಿ ವ್ಯವಹಾರಗಳು. ನಡುವೆ ಅನಾಯಾಸವಾಗಿ ನಾನು ಹುಡುಕುತ್ತಿದ್ದ ವಸ್ತು ಕಣ್ಣಿಗೆ ಬಿದ್ದಾಗ ಒಮ್ಮೆಗೇ ಎದೆಬಡಿತ ತೀವ್ರತೆ ಪಡೆದುದು ಸ್ಪಷ್ಟವಾಗಿತ್ತು. ಹಾಗೇ ಸಾವರಿಸಿಕೊಂಡು ಕೆಳಗಿಳಿದು ಮಂಚದ ಮೇಲೆ ಕುಳಿತು ಅದಕ್ಕೆ ಹೊದಿಸಿ ಅಂಟಿಸಿದ್ದ ಕವರ್ ಬಿಡಿಸಿದೆ. ಹಿಂದಿನ ಅದೇ ಡೇಟುಗಳ ಎರಡು ಪುಟಗಳ ನಡುವೆ ಆ ಪತ್ರ ಒಂದು ಮೋಹಕ ಮೈಮರೆವಿನಲ್ಲಿ ತೆಳ್ಳಗೆ ಅಂಟಿ ಕುಳಿತಿತ್ತು. ಮೆತ್ತಗೆ, ಮೂರು ತಿಂಗಳ ಮಗುವನ್ನೆತ್ತಿದಂತೆ ಅನನ್ಯ ಆಕರಾಸ್ಥೆಯಿಂದ ಕೈಗೆತ್ತಿಕೊಂಡೆ. ಗಾಯಗೊಂಡು ನೆಲಕಚ್ಚಿದ ಹಕ್ಕಿ ಒಂದು ಸಂಜೀವಿನಿ ಸ್ಪರ್ಶದಲ್ಲಿ ಮತ್ತೆ ಚೇತರಿಸಿ ರೆಕ್ಕೆ ಬಡಿದಂತೆ ಹೃದಯ ಹೊಡೆದುಕೊಳ್ಳುತಿತ್ತು. ಸ್ನೇಹದ ಸಂಪನ್ನ ಮೆರುಗಿನಲ್ಲಿ ಕಂಗೊಳಿಸುವ ಅಕ್ಷರಮಾಲೆ. ಅದೇ ಮೇಘಸಂದೇಶ. ಖಾಲಿಯಾದ ಎದೆಯ ಕಾಗದದ ಮೇಲೆ ವರ್ಷ ವರ್ಷವೂ ಮೂಡಿ ಮರೆಯಾಗುತ್ತಿದ್ದ ಮನದ ಮಂಗಲಸೂತ್ರ! ಮರೆತುಹೋದ ಮಂತ್ರವೊಂದು ಒಂದು ಶುಭ್ರ ಸೂರ್ಯೋದಯಕ್ಕೆ ಅಪ್ರಯತ್ನವಾಗಿ ಸ್ಫುಟವಾಗಿ ತುದಿನಾಲಿಗೆಯಲ್ಲಿ ಬಂದಂತೆ ಕಣ್ಮುಚ್ಚಿ ಒಮ್ಮೆ "ಪ್ರೇಮಾ..." ಎಂದು ಕನವರಿಸಿದೆ! ಪಕ್ಕದಲ್ಲಿದ್ದ ಫೋನು ಒಮ್ಮೆಗೇ ರಿಂಗಾದಾಗ ಯಾಕೋ ತೀರ ಕರ್ಕಶವೆನಿಸಿತು. ತರವಾಡುಮನೆಯಲ್ಲಿ ಅಣ್ಣನೊಂದಿಗಿದ್ದ, ಇಳಿವಯಸ್ಸಲ್ಲು ಅಚ್ಚುಕಟ್ಟಾಗಿ ತನ್ನ ಪಾಡು ನೋಡಿಕೊಂಡಿದ್ದ ಅಮ್ಮ ಇದೀಗ ವಿಧಿವಶರಾದ ಸಂದೇಶವಾರ್ತೆ! ಒಮ್ಮೆಗೇ ಹೊರಗೋಡಿದೆ. ಲಲಿತೆಗೆ ವಿಷಯ ತಿಳಿಸಿ ಹೊರಡುವ ತಯಾರಿ ಅವಸರದಲ್ಲಿ ನಡೆಯಿತು. ಮನೆಯ ಎಲ್ಲ ಕಿಟಿಕಿ ಬಾಗಿಲುಗಳನ್ನು ಮುಚ್ಚಿ ಮತ್ತೆ ಬೆಡ್‌ರೂಮಿನೊಳಗೆ ಬಂದಾಗ ಎದೆ ಝಲ್ಲೆಂದಿತು! ಆ ಬರಹವನ್ನೆಲ್ಲಿ ಬಿಟ್ಟಿದ್ದೆ? ಎಷ್ಟು ಯೋಚಿಸಿದರೂ ನೆನಪಿಗೆ ಬರಲಿಲ್ಲ. ಡೈರಿಗಳನ್ನೆಲ್ಲಾ ಮತ್ತೆ ಬಾಕ್ಸಿನಲ್ಲಿ ಜೋಡಿಸಿಡಲಾಗಿತ್ತು. ಲಲಿತಾ ನೋಡಿರಬಹುದೇ? ಗಡಿಬಿಡಿಯಲ್ಲೂ ಗಮನಿಸಿದೆ. ಅಮ್ಮನ